**ಪ್ರಮಾಣ ವಚನ ಬೋಧಿಸಿದ ದಿನಾಂಕಃ 07.11.2024**

**ವಾಟೀ-ಸವಾಲು ಶ್ರೀ ಆರ್.ಆರ್ ವಕೀಲರಿಂದ ಆರೋಪಿಯ ಪರವಾಗಿಃ**

1. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ಮಾತನಾಡಲು ಬರುತ್ತದೆ. ನನ್ನ ಮಗಳ ಸಾವಿನ ಸುದ್ದಿ ತಿಳಿದು ಅವರ ಮನೆಗೆ ಬೆಳಗ್ಗೆ 8.30 ಗಂಟೆಗೆ ಹೋಗಿರುತ್ತೇವೆ. ನಾವು ಹೋದಾಗ ಸ್ಥಳದಲ್ಲಿ ಜನರು, ಪೊಲೀಸರು ಇರಲಿಲ್ಲ. ಆರೋಪಿ ಒಬ್ಬನೇ ಇದ್ದ. ನಾನು ಹಾಗೂ ಮನೆಯವರೆಲ್ಲ ಆರೋಪಿ ತಿಳಿಸಿದ ನಂತರ ಅವರ ಮನೆಗೆ ಹೋಗಿರುತ್ತೇವೆ. ನಾವು ಹೋದಾಗ ನನ್ನ ತಂಗಿಯ ಶವ ನೇಣು ಬಿಗಿದ ಸ್ಥಿತಿಯಲ್ಲಿದ್ದು, ಆಕೆಯ ಕಾಲುಗಳು ನೆಲಕ್ಕೆ ತಾಗುತ್ತಿತ್ತು. ವೇಲ್ ನಿಂದ ನೇಣು ಬಿಗಿದಕೊಂಡ ಹಾಗೇ ಕಾಣುತ್ತಿತ್ತು.

2. ಆರೋಪಿ ಕಾರ್ ಚಾಲಕನ ಕೆಲಸ ಮಾಡುತ್ತಾನೆ. ನನ್ನ ಮಗಳ ಮದುವೆಗೆ ನಾನು ಹೋಗಿದ್ದೇನು. ನನ್ನ ಗಂಡ ಮತ್ತು ಮಗ ಮದುವೆಗೆ ಬಂದಿರಲಿಲ್ಲ. ಅವರಿಬ್ಬರಿಗೂ ಈ ಮದುವೆ ಇಷ್ಟ ಇರಲಿಲ್ಲ ಎಂದರೆ ಸಾಕ್ಷಿ ಅವರಿಗೆ ಗೊತ್ತೇ ಇರಲಿಲ್ಲ ಎಂದು ಹೇಳುತ್ತಾರೆ. ಮದುವೆ ಖರ್ಚನ್ನೆಲ್ಲ ಆರೋಪಿತನೇ ಭರಿಸಿರುತ್ತಾನೆ. ಆರೋಪಿಗೆ ಬೆಂಗಳೂರಿನ ಕಬ್ಬಾಳದಲ್ಲಿ ಸ್ವಂತ ಮನೆ ಇರುತ್ತದೆ ಎಂದರೆ ಹೌದು. ನಾವು ಕೂಲಿ ಕೆಲಸ ಮಾಡಿಕೊಂಡಿದ್ದೇವು. ಆರೋಪಿ ಸ್ವಂತ ಮನೆ, ಕಾರು ಹೊಂದಿದ್ದಾನೆ, ಮಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತಾನೆ ಎಂದು ಮದುವೆ ಮಾಡಿಕೊಟ್ಟಿದ್ದೆ. ಆರೋಪಿ ಹಾಗೂ ನನ್ನ ಮಗಳು ಮದುವೆಗೆ ಮೊದಲು ಪ್ರೀತಿಸುತ್ತಿರಲಿಲ್ಲ. ಆರೋಪಿಯೇ ನನ್ನ ಮಗಳನ್ನು ಮದುವೆ ಆಗುವುದಾಗಿ ತನ್ನ ಅಣ್ಣ, ತಾಯಿ ಜೊತೆ ಬಂದು ನನ್ನನ್ನು ಹಾಗೂ ನನ್ನ ಗಂಡ ಮತ್ತು ಮಗನನ್ನು ಕೇಳಿರುತ್ತಾನೆ. ಆಗ ಆರೋಪಿಯೇ ಖರ್ಚು ವೆಚ್ಚಗಳನ್ನು ನೋಡಿಕೊಳ್ಳುವುದಾಗಿ ಹೇಳಿದ್ದ ಎಂದರೆ ಹೌದು. ನಾವು ಬಡವರು ಎಂದು ಗೊತ್ತಿದ್ದರು ಸಹ ಹೆಣ್ಣು ಕೇಳಲು ಬಂದಿರುತ್ತಾನೆ. ನನ್ನ ಮಗಳನ್ನು

ನಾನು ಹಾಗೂ ನನ್ನ ಅಕ್ಕ ಒಪ್ಪಿಸಿ ಆರೋಪಿಯೊಂದಿಗೆ ಮದುವೆ ಮಾಡಿರುತ್ತೇನೆ. ನನ್ನ ಅಕ್ಕನ ಹೆಸರು ಚೌಡಮ್ಮ.

3. ದೂರು ನೀಡುವಾಗ ನನ್ನ ಮಗ ನನ್ನ ಜೊತೆ ಇದ್ದ. ಅವನಿಗೆ ಓದಲು ಬರೆಯಲು ಬರುತ್ತದೆ. ದೂರಿನಲ್ಲಿ ನನ್ನ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತೇನೆ. ದೂರನ್ನು ನಿಮ್ಮ ಮಗ ಬರೆದಿರುತ್ತಾನೆಯೇ ಎಂದರೆ ಸಾಕ್ಷಿ ಯಾರು ಬರೆದಿರುತ್ತಾರೋ ಗೊತ್ತಿಲ್ಲ, ನನ್ನ ಮುಂದೆ ದೂರನ್ನು ಬರೆದಿಲ್ಲ, ಒಟ್ಟಿನಲ್ಲಿ ನಾನು ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತೇನೆ ಎಂದು ಹೇಳುತ್ತಾರೆ. ದೂರಿನಲ್ಲಿ ಬರೆದಿರುವ ಸಂಗತಿ ನನಗೆ ಗೊತ್ತಿಲ್ಲ. ಅದನ್ನು ನಾನು ಓದಿರುವುದಿಲ್ಲ. ಮದುವೆ ಆದ ನಂತರ ನನ್ನಮಗಳ ಮನೆಗೆ ನಾವೆಲ್ಲರು ಹೋಗುತ್ತಿದ್ದೆವು. ಆರೋಪಿ ನನ್ನ ಮಗಳನ್ನು ಚೆನ್ನಾಗಿಯೇ ನೋಡಿ ಕೊಳ್ಳುತ್ತಿದ್ದ. ಮದುವೆ ಆಗಿ ನಾಲ್ಕು ವರ್ಷಗಳಾದರೂ ಆಕೆಗೆ ಮಕ್ಕಳು ಏಕೆ ಆಗಿರುವುದಿಲ್ಲ ಎಂದು ನನಗೆ ಗೊತ್ತಿರುವುದಿಲ್ಲ. ಮದುವೆಗೆ ಮೊದಲು ನನ್ನ ಮಗಳು ಸಣ್ಣಗಿದ್ದಳು. ಆ ನಂತರ ಸ್ವಲ್ಪ ದಪ್ಪ ಆಗಿದ್ದಳು ಎಂದರೆ ಹೌದು. ನನ್ನ ಮಗಳಿಗೆ PCOD ಹಾಗೂ ಥೈರಾಯ್ಡ್ ಸಮಸ್ಯೆ ಇದ್ದ ಕಾರಣ ಆಕೆ ದೈಹಿಕವಾಗಿ ದಪ್ಪವಾಗಿದ್ದಳು ಎಂದರೆ ಸಾಕ್ಷಿ ಆಕೆಗೆ ಏನು ಆರೋಗ್ಯ ಸಮಸ್ಯೆ ಇರಲಿಲ್ಲ, ಗುಂಡು ಕಲ್ಲಿನಂತೆ ಇದ್ದಳು ಎಂದು ಹೇಳುತ್ತಾರೆ. ಆಕೆಗೆ ಏಕೆ ಮಕ್ಕಳು ಆಗಿರುವುದಿಲ್ಲ ಎಂದು ಕೇಳಿದಾಗ ದೇವರು ದಿಂಡರು ಮಾಡಿಕೊಂಡಿದ್ದೇವೆ ಎಂದು ಹೇಳುತ್ತಿದ್ದಳು.

4. ನಾನು ನನ್ನ ಮಗ ಹೇಳಿದ ಕಾರಣ ಆರೋಪಿಯ ವಿರುದ್ಧ ದೂರು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನೇ ಸ್ವತಃ ಕೊಟ್ಟಿರುತ್ತೇನೆ. ನಾವು ಹೋದ ನಂತರ ನಾವು ಮನೆಯ ಬಳಿ ಸುಮಾರು ಅರ್ಧ ಗಂಟೆ ಕಾಲ ನಾನು ಇದ್ದೇನು. ನಂತರ ಕಗ್ಗಲೀಪುರ ಪೊಲೀಸ್ ಠಾಣೆಗೆ ದೂರು ನೀಡಿರುತ್ತೇನೆ. ಪೊಲೀಸ್ ಠಾಣೆಯಲ್ಲಿ ಒಂದು ಬಾರಿ ಎಡಗೈ ಹೆಬ್ಬೆಟ್ಟಿನ ಗುರುತು ಹಾಕಿರುತ್ತೇನೆ. ಆಗ

ಸುಮಾರು 10.00 ಗಂಟೆ ಆಗಿರಬಹುದು. ಆಗ ನನ್ನ ಮಗ ಮತ್ತು ಗಂಡ ನನ್ನ ಜೊತೆ ಬಂದಿರುವುದಿಲ್ಲ. ಅವರು ಶವದ ಬಳಿ ಇದ್ದರು. ನಾನು ಅಳಿಯನೊಂದಿಗೆ ಚೆನ್ನಾಗಿ ಇದ್ದೇನು. ಅವರ ಜೊತೆ ಮಾತನಾಡುತ್ತಿದ್ದೇನು. ಆರೋಪಿ ನಮ್ಮ ಬಳಿ ಯಾವತ್ತೂ ಹಣ ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಸಂಘದಲ್ಲಿ ದುಡ್ಡು ತೆಗೆದುಕೊಡಲು ಕೇಳಿರುತ್ತಾನೆ. ನಾನು 40,000 ರೂಪಾಯಿಗಳನ್ನು ಆತನಿಗೆ ಸಂಘದಿಂದ ತೆಗೆದುಕೊಟ್ಟಿರುತ್ತೇನೆ. ಆರೋಪಿ ಸಹಾಯ ಮಾಡಲು ಕೇಳಿರುತ್ತಾನೆ. ನಾನು ಕೊಟ್ಟಿರುತ್ತೇನೆ. ನನ್ನ ಮಗಳು ತೀರಿಕೊಳ್ಳುವ ಒಂದು ವರ್ಷದ ಮೊದಲು ಆ ರೀತಿ ನನ್ನಿಂದ ಹಣ ಪಡೆದುಕೊಂಡಿರುತ್ತಾನೆ. ನಾನು ಸಾಲವನ್ನು ಒಂದು ವರ್ಷದಲ್ಲಿ ತೀರಿಸಿರುತ್ತೇನೆ. ನನ್ನ ಮಗಳು ತೀರಿಕೊಳ್ಳುವ ಕಾಲಕ್ಕೆ ಸಾಲ ತೀರಿಸಿದ್ದೆ. ಆರೋಪಿ ನನಗೆ ಹಣವನ್ನು ಹಿಂದಿರುಗಿಸಿರುವುದಿಲ್ಲ, ಕಂತು ಕಟ್ಟಿರುವುದಿಲ್ಲ. ನಾನು ಸಹ ಆರೋಪಿಯ ಬಳಿ ಹಣ ಕೇಳಿರುವುದಿಲ್ಲ.

5. ಸಾಲ ಪಡೆದುಕೊಂಡ ಒಂದು ವರ್ಷದ ಅವಧಿಯಲ್ಲಿ ನನ್ನ ಮಗಳ ಮನೆಗೆ ಹೋಗಿ ಬಂದು ಮಾಡುತ್ತಿದ್ದೆ. ಆಗಲೂ ಸಹ ಚೆನ್ನಾಗಿ ಇದ್ದರು. ಒಂದೆರಡು ಬಾರಿ ನನ್ನ ಮಗಳಿಗೆ ಹೊಡೆದು ಕಳುಹಿಸಿದ್ದ. ನಾನೇ ಒಂದೆರಡು ಬಾರಿ ತಿಳುವಳಿಕೆ ಹೇಳಿರುತ್ತೇನೆ. ನಾನು ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮಗ ಮತ್ತು ನನ್ನ ಗಂಡನ ಮಾತು ಕೇಳಿಕೊಂಡು ಆರೋಪಿ ವಿರುದ್ದ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಂಘದಲ್ಲಿ ಸಾಲ ತೆಗೆದುಕೊಂಡ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕಗಲೀ ಪೊಲೀಸರಿಗೆ ಕೊಟ್ಟಿಲ್ಲ ಎಂದರೆ ಹೌದು. ನಾನು ಯಾವುದೇ ಸಂಘದಲ್ಲಿ ಕಂತು ಕಟ್ಟಿಲ್ಲ, ಸಾಲ ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ನನಗೆ ಎಲ್ಲ ವಿಷಯಗಳು ತಿಳಿದಿದ್ದರೂ, ಆರೋಪಿ ಯಾವುದೇ ಅಪರಾಧವನ್ನು ಎಸಗದೇ ಇದ್ದರು ನನ್ನ ಮಗಳ ಸಾವಿನ ನೋವು ಮತ್ತು ದುಃಖದಲ್ಲಿ ಆರೋಪಿತನ ವಿರುದ್ಧ ನನ್ನ ಮಗ ಮತ್ತು ಗಂಡನ ಚಿತಾವಣ

ಮೇರೆಗೆ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸ. ಒ.

(ಶ್ರೀ. ದೇವಾನಂದ)
6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.